ಸೊರಬ ತಾಲ್ಲೂಕಿನಲ್ಲಿ ಶಿಡ್ಡಿಹಳ್ಳಿ ಗ್ರಾಮದ ಪತ್ರ ಪ್ಯಾರ್ಟೀರ್ಷ ಗೋಸ್ಕರ ತೆಗದುಕೊಂಡ ಜಾಗ ಚತುರ್ಗಡಿ.

ಉತ್ತರಕ್ಕೆ—ಶಿಡ್ಡಿಹಳ್ಳಿ ಗ್ರಾಮದ ನಂಬರ್ 232ನೇ ಕೆರೆ ಮತ್ತು ಸಾಗುವಳಿ ಜಮೀನು ಸಹ.

ಪೂರ್ವಕ್ಕೆ—ಶಿಡ್ಡಿಹಳ್ಳಿ ಗ್ರಾಮದ ಸರ್ವೆ ನಂಬರ್ 62ರ ಜಾಗ ಮತ್ತು ಗ್ರಾಮ ಸಹ.

ದಕ್ಷಿಣಕ್ಕೆ—ತಾಳಗುಪ್ಪೆ ಜಂಗಲ್ ಸರ್ವೆ ನಂಬರ್ 20.

ಪಶ್ಚಿಮಕ್ಕೆ—ಶಿಡ್ಡಿಹಳ್ಳಿ ಜಂಗಲಿಯ ಸರ್ವೆ ನಂಬರ್ 2.

ಯಿವರ ಅಳತೆ 560 ಯಕರೆ.

ಎಲ್. ರೈಸ್,
ಫಾರೆಸ್ಟ್ಸ್ ಇನ್‌ಸ್ಪೆಕ್ಟರ್ ಜನರಲ್.

ನೋಟಿಫಿಕೇರ್ಷ.

ತಾರೀಖು 18ನೇ ಜನವರಿ 1888.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ ೧೮೭೮ನೇ ಇಸವಿ ಜೂ॥ 8ನೇ ತಾರೀಖಿನ ಫಾರೆಸ್ಟ್ ರೂಲ್ಸ್ 13ನೇ ಸೆಕೆರ್ಷ ಅನುಸಂಧಿ ಈ ಕೆಳಗೆ ನಮೂದಿಸಿ ಯಿರುವ ವೈಟ್ ಫಾರೆಸ್ಟ್ಸುಗಳು ಮತ್ತು ಪ್ಯಾರ್ಟೀರ್ಷಗಳು 1889ನೇ ಇಸವಿ ಮೇ ಆಯ್ಯರವರಿಗಿನ ಬಿಸಲುಕಾಲದಲ್ಲಿ ಬಂದ್ ಮಾಡಲ್ಪಟ್ಟಿರುತ್ತದೆ, ಈ ಮೇಲ್ಕಂಡ ಅಯ್ಯಾಮಿನಲ್ಲಿ ಯಾವ ವಿಧವಾದ ಸಿಕಾರಿಯೂ ನಿರೋಧಿಸಲ್ಪಟ್ಟಿದೆ, ಅತಿಕ್ರಮ ಪ್ರವೇಕಮಾಡುವವರು ಪ್ರಾಸಿಕ್ಯೂಷನಿಗೆ ಒಳಪಟ್ಟಾರು.

ನಂಬರು.	ಸ್ಟೇಟ್ ಫಾರೆಸ್ಟ್ ವ ಪ್ಯಾರ್ಟೀರ್ಷ ಹೆಸರು.	ತಾಲ್ಲೂಕು.
1	ಲಕ್ಕವಳ್ಳಿ ಸಾಗುವಾನೀ ಪ್ಯಾರ್ಟೀರ್ಷ	ತರಿಕೆರೆ
2	ಡಿಟೋ ಸ್ಟೇಟ್ ಫಾರೆಸ್ಟ್	ಡಿಟೋ
3	ಕರಡಿಹಳ್ಳಿ ಪ್ಯಾರ್ಟೀರ್ಷ	ಚಿಕ್ಕಮಗಳೂರು
4	ಮಟ್ಟಾವಾರ ನಂಬರ್ ರಿಜರ್ವ್	ಡಿಟೋ
5	ಹೆಬ್ಬೆ ಪ್ಯಾರ್ಟೀರ್ಷ	ಎಡೆಹಳ್ಳಿ ಸಬ್ ತಾಲ್ಲೂಕು

ವೈ. ಸೀತಾರಾಮಯ್ಯ,
ಸಬ್ ಅಸಿಸ್ಟೆಂಟ್ ಕಾರ್ಸರವೇಟರ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 78.

ಬೆಂಗಳೂರು ತಿಗಳಪ್ಯಾಟೇಲಿ ಇದ್ದು ಮೃತಪಟ್ಟ ಅಂಡಿಮುನಿಸಾಮಪ್ಪನ ಆಸ್ತಿ ವಿಷಯದಲ್ಲಿ—

ಅರ್ಜಿದಾರು) ದೊಡ್ಡಮುತ್ತ್ಯಯ್ಯ ಮೈನರ್, ಗಾರ್ಡಿಯರ್ ಹುಚ್ಚಮ್ಮ ಮೃತಪಟ್ಟ ಸದರೀ ಮುನಿಸಾಮಪ್ಪನಿಗೆ ಮೈನರನು ಮಗನು ಆಗಬೇಕೆಂಬ ಹಕ್ಕುದಾರಿ ನೇಲೆ ಬೆಂಗಳೂರು ಸ್ಥಳದ ದೊಡ್ಡ ಮುತ್ತ್ಯಯ್ಯನ ಗಾರ್ಡಿಯರ್ ಹುಚ್ಚಮ್ಮ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಮುನಿಸಾಮಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ವರಖಾಸ್ತುದಾರಳಾದ ಹುಚ್ಚಮ್ಮನ ಅರ್ಜಿಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 15 ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿುಮರ್ಸಿ ಮಾಡಲ್ಪಡುತ್ತೆ. ಆ ಕಾಲವಲ್ಲಿ ಸದರೀ ಮೃತಪಟ್ಟ ಮುನಿಸಾಮಪ್ಪನ ಆಸ್ತಿಗೆ ಹಕ್ಕುದಾರರಾದ ವಿರೋಧ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1888ನೇ ಇಸವಿ ಅರ್ಜಿ ನಂಬರ್ 1136.

ದೊಡ್ಡಬಳ್ಳಾಪುರದಲ್ಲಿ ಇದ್ದು ಮೃತಪಟ್ಟ ದೇವಾಂಗದ ದೊಡ್ಡನಂಜುಂಡಪ್ಪನ ಆಸ್ತಿ ವಿಷಯಲ್ಲಿದ—

ಅರ್ಜೀದಾರು) ನಂಜುಂಡಪ್ಪ ಮರಿಯಪ್ಪ ಸಹ ಮೃತಪಟ್ಟ ಸದರೀ ದೊಡ್ಡನಂಜುಪ್ಪನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ದೊಡ್ಡ ಬಳ್ಳಾಪುರ ಸ್ಥಳದ ನಂಜುಂಡಪ್ಪ, ಮರಿಯಪ್ಪ ಸಹ ದೊಡ್ಡ ಬಳ್ಳಾಪುರ ವಾಸಸ್ಥರಾಗಿ ಮೃತಪಟ್ಟ ದೊಡ್ಡನಂಜುಂಡಪ್ಪನ ಜಿಂ